ಇಬ್ಬರೂ ಅಗಲಿದರು. ಒಂದೆರಡು ಕ್ಷಣ ಅವರಿಬ್ಬರ ಬೆರಳುಗಳು ಹಣೆದುಕೊಂಡಿದ್ದವು. ಆಗ ಕೈಂಫ್ಟಿ ಫಾಲ್ಸ್‌ನ ಆ ದಿನ ಮರುಕಳಿಸಿತ್ತು.

'ಬಾಯ್...' ಎಂದು ಹೇಳುತ್ತ ಇಬ್ಬರೂ ಆಯುಧಗಳೊಂದಿಗೆ ತಮ್ಮ ತಮ್ಮ ಗಡಿ ನಿಯಂತ್ರಣ ರೇಖೆಗಳತ್ತ ಹೊರಟರು.

ಅಷ್ಟರಲ್ಲಿ ಎರಡೂ ಕಡೆಯ ಸೈನಿಕರ ದಂಡುಗಳು ತಮ್ಮ ತಮ್ಮ ಅಧಿಕಾರಿಗಳನ್ನು ಹುಡುಕುತ್ತ ಆ ಕಂದರದ ತುದಿಯವರೆಗೂ ಬಂದು ತಲುಪಿದ್ದವು. ಇತ್ತ ಇಳಿಜಾರಿನ ಎಡಬದಿಗೆ ಪಾಕಿಸ್ತಾನದ ಸೈನಿಕರು ಸನ್ನದ್ಧರಾಗಿದ್ದರು. ಬಲಬದಿಗೆ ವೀರೇಂದ್ರ ಸಿಂಹ್ ಪಟಿಯಾಲಾನ ಇಂಡಿಯಾದ ಸೈನಿಕರಿದ್ದರು.

ಎರಡೂ ಬದಿಯ ಸೈನಿಕರು ಇಂಥದ್ದರಲ್ಲಿ ಹೇಗೆ ಗುಂಡು ಹಾರಿಸಬೇಕು? ತಮ್ಮ ಅಧಿಕಾರಿಗೆ ಗುಂಡು ತಗುಲಬಹುದು ಎಂದುಕೊಂಡು ಯೋಚನೆಗೀಡಾಗಿದ್ದರು. ಗೆಳೆಯರಿಬ್ಬರೂ ನಿಧಾನಕ್ಕೆ ಬೆಟ್ಟ ಏರಲಾರಂಭಿಸಿದರು. ಅಷ್ಟರಲ್ಲಿ ಎರಡೂ ಕಡೆಯಿಂದ ಶತ್ರು ಅಧಿಕಾರಿಗಳನ್ನು ಗುರಿಯಾಗಿಸಿ ಗುಂಡಿನ ದಾಳಿ ಪ್ರಾರಂಭವಾಯಿತು.

ಇಬ್ಬರೂ 'ಡೋಂಟ್ ಫೈರ್...' ಎಂದು ಹೇಳುತ್ತಲೇ ಇದ್ದರು. ಆದರೆ, ಅವರ ಧ್ವನಿಗಳು ಕಣ್ಣಿಲ್ಲದ, ಕಿವಿಗಳಿಲ್ಲದ ಗುಂಡುಗಳ ಸದ್ದಿನಲ್ಲಿ ಅಡಗಿಹೋದವು.

ಇಬ್ಬರ ರಕ್ತಸಿಕ್ತ ದೇಹಗಳು ಉರುಳುತ್ತ ಮತ್ತೆ ಕಣಿವೆಗೆ ಬಂದು ಬಿದ್ದವು. ಇಬ್ಬರೂ ಕೈ ಚಾಚಿದರು.

'ಬಾರೋ ಗೆಳೆಯಾ, ಇನ್ನಾದರೂ ಕೊರಳಿಗೆ ಬೀಳು...'

ಬೇರ್ಪಟ್ಟಿದ್ದ ಈ ಗೆಳೆಯರ ಅಂತಿಮ ಮಿಲನಕ್ಕೆ ಹಿಮಾಲಯ ಕೆಂಪು ಹಿಮದ ರಂಗೋಲಿ ಹಾಸಿತ್ತು. ಇಬ್ಬರೂ ಒಬ್ಬರಿಗೊಬ್ಬರ ಕೊರಳಿಗೆ ಬಿದ್ದು ಅಲ್ಲಿಯೇ ಕಣ್ಣುಮುಚ್ಚಿದರು.

ಆ ನೆಲ... ಆ ಸ್ಥಳ... ಇಬ್ಬರೂ ಶತ್ರುಗಳಲ್ಲಿ ಯಾರದೂ ಆಗಿರಲಿಲ್ಲ... ಅದು 'ನೊ ಮ್ಯಾನ್ಸ್ ಲ್ಯಾಂಡ್' ಆಗಿತ್ತು!

## ಅಮಿತಾಭಶಂಕರ ರಾಯ್ ಚೌಧರಿ

ಮೂಲತಃ ಪಂಜಾಬಿನ ಈ ಲೇಖಕ ಪ್ರಸ್ತುತ ವಾರಾಣಾಸಿಯಲ್ಲಿ ನೆಲೆಸಿದ್ದಾರೆ. ದೇಶದ ಪ್ರಮುಖ ಹಿಂದೀ ಪತ್ರಿಕೆಗಳಿಗೆ ಹಲವಾರು ಲೇಖನಗಳು, ಮಕ್ಕಳಿಗಾಗಿ ಎರಡು ಕಾದಂಬರಿಗಳು (ಇಂಗ್ಲಿಷ್‌ನಲ್ಲಿ) 4 ಕಥಾಸಂಕಲನಗಳು (ಹಿಂದಿಯಲ್ಲಿ) ಬರೆದಿದ್ದಾರೆ. ನ್ಯಾಷನಲ್ ಬುಕ್ ಟ್ರಸ್ಟ್‌ನ ಪುರಸ್ಕಾರ ಲಭಿಸಿದೆ.

## ಗಿರೀಶ ಚಂದ್ರಕಾಂತ ಜಕಾಪುರೆ

ಮಹಾರಾಷ್ಟ್ರದ ಮೈಂದರ್ಗಿಯವರಾದ ಗಿರೀಶ ಪ್ರಸ್ತುತ ಗುಲ್ಬರ್ಗ ಜಿಲ್ಲೆಯ ಮಾದನ ಹಿಪ್ಪರಗಿಯಲ್ಲಿ ಶಿಕ್ಷಕರಾಗಿದ್ದಾರೆ.

ಕವಿತೆ, ಕತೆ, ಮಕ್ಕಳ ಕತೆ, ವ್ಯಕ್ತಿಚಿತ್ರಗಳು, ಜೀವನಚರಿತ್ರೆಗಳ ಪುಸ್ತಕಗಳನ್ನು ಪ್ರಕಟಿಸಿರುವ ಅವರು ಹಿಂದಿ ಭಾಷೆಯಲ್ಲೂ ಕವಿತೆ, ಗಜಲ್ ಹಾಗೂ ಕತೆಗಳ ಬರವಣಿಗೆ ಮಾಡಿದ್ದಾರೆ.